ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
ಕನ್ನಡ ಕಾಯಕ ವರ್ಷ 2021-22

ಸಂಖ್ಯೆ:ಕಾಶಿಇ/ಶೈವಿ/10/ಸುತ್ತೋಲೆ/2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಉನ್ನತ ಶಿಕ್ಷಣ ಸೌಧ. ಶೇಷಾದ್ರಿ ರಸ್ತೆ.
ಬೆಂಗಳೂರು. ದಿನಾಂಕ:25.10.2021

# ಸುತ್ತೋಲೆ

**ವಿಷಯ :** 2020-21 ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಮತದಾರರ ದಿನಾಚರಣೆ (NVD) ಗೆ ಸಂಬಂಧಿಸಿದಂತೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಆಯೋಜಿಸುವ ಕುರಿತು.

**ಉಲ್ಲೇಖ :** ಜಂಟಿ ಮುಖ್ಯ ಚುನಾವಣಾಧಿಕಾರಿಗಳು, ಸಿ.ಆ.ಸು.ಇ ( ಚುನಾವಣೆಗಳು), ಬೆಂಗಳೂರು ಇವರ ಪತ್ರ ಸಂಖ್ಯೆ: ಸಿಆಸುಇ/33/SVEEP/2021, ದಿನಾಂಕ:22.10.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸುತ್ತೋಲೆಯಲ್ಲಿ ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ನೂತನ ಮತ್ತು ಭವಿಷ್ಯದ ಯುವ ಮತದಾರರಲ್ಲಿ ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಸಲುವಾಗಿ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ "ಮತದಾರರ ಸಾಕ್ಷರತಾ ಸಂಘ" (Electoral Literacy Clubs) ಗಳನ್ನು ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಕೇಂದ್ರಗಳಲ್ಲಿ ಚುನಾವಣಾ ಪಾಠಶಾಲೆಗಳನ್ನು ಸ್ಥಾಪಿಸಲಾಗಿದೆ.

ಪ್ರತಿ ವರ್ಷ 25ನೇ ಜನವರಿಯಂದು ರಾಷ್ಟ್ರೀಯ ಮತದಾರರ ದಿನಾಚರಣೆ ( National Voters'Day) ಆಚರಿಸಲಾಗುತ್ತದೆ. ಸದರಿ ದಿನ ಹೊಸ ಮತದಾರರಿಗೆ ಮತದಾರರ ಗುರುತಿನ ಚೀಟಿ (ಎಫಿಕ್ ಕಾರ್ಡ್) ನೀಡಿ ಮತದಾರರ ಸಾಕ್ಷರತೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ತಾಲ್ಲೂಕು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಏರ್ಪಡಿಸಬೇಕಾಗಿರುವ ಸ್ಪರ್ಧೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ವಿವರಗಳನ್ನು ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಿದ್ದು, ಅದರಂತೆ ಎಲ್ಲಾ ಪ್ರಾಂಶುಪಾಲರುಗಳು ಅಗತ್ಯ ಕ್ರಮವಹಿಸಿ ಕೈಗೊಂಡ ಕ್ರಮದ ಮಾಹಿತಿಯನ್ನು ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರ ಮುಖಾಂತರ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳ ಕಛೇರಿ ಬೆಂಗಳೂರು ಇವರಿಗೆ ಸಲ್ಲಿಸಿ ಅದರ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

**ಅಡಕ : ಉಲ್ಲೇಖಿತ ಸುತ್ತೋಲೆ**

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ

1. ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು - ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
2. ಕಛೇರಿ ಪ್ರತಿ.

**ಮುಖ್ಯ ಚುನಾವಣಾಧಿಕಾರಿಯವರ ಕಛೇರಿ, ಕರ್ನಾಟಕ**
ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.

---

ಸಂಖ್ಯೆ: ಸಿಆಸುಇ/33/SVEEP/2021 ದಿನಾಂಕ: 12ನೇ ಅಕ್ಟೋಬರ್ 2021

**ಸುತ್ತೋಲೆ**

**ವಿಷಯ: 2021-22ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಮತದಾರರ ದಿನಾಚರಣೆ (NVD) ಗೆ ಸಂಬಂಧಿಸಿದಂತೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಆಯೋಜಿಸುವ ಕುರಿತು.**

- - -

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ನೂತನ ಮತ್ತು ಭವಿಷ್ಯದ ಯುವ ಮತದಾರರಲ್ಲಿ ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಸಲುವಾಗಿ ಪ್ರೌಢಶಾಲೆಗಳು, ಪದವಿ ಪೂರ್ವ-ತತ್ಸಮಾನ / ಆರ್ಟ್ಸ್ ಮತ್ತು ಡ್ರಾಯಿಂಗ್ ಶಾಲೆ / ಪ್ರಥಮ ದರ್ಜೆ-ತತ್ಸಮಾನ ಕಾಲೇಜುಗಳು / ವೈದ್ಯಕೀಯ ಕಾಲೇಜು / ತಾಂತ್ರಿಕ ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಸೇರಿದಂತೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ "ಮತದಾರರ ಸಾಕ್ಷರತಾ ಸಂಘ" [Electoral Literacy Clubs] ಗಳನ್ನು ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಕೇಂದ್ರಗಳಲ್ಲಿ ಚುನಾವಣಾ ಪಾಠಶಾಲೆ [ಚುನಾವಣಾ ಜಾಗೃತಿ ಸಂಘ] ಗಳನ್ನು ಸ್ಥಾಪಿಸಲಾಗಿದೆ.

ಪ್ರತಿ ವರ್ಷ 25ನೇ ಜನವರಿಯಂದು ರಾಷ್ಟ್ರೀಯ ಮತದಾರರ ದಿನಾಚರಣೆ (National Voters' Day) ಆಚರಿಸಲಾಗುತ್ತದೆ. ಸದರಿ ದಿನ ಹೊಸ ಮತದಾರರಿಗೆ ಮತದಾರರ ಗುರುತಿನ ಚೀಟಿ (ಎಪಿಕ್ ಕಾರ್ಡ್) ನೀಡಿ ಮತದಾರ ಸಾಕ್ಷರತೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಶಾಲಾ/ಕಾಲೇಜು, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಏರ್ಪಡಿಸಬೇಕಾಗಿರುವ ಸ್ಪರ್ಧೆಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ವಿವರಗಳು ಈ ಕೆಳಕಂಡಂತಿರುತ್ತವೆ.

I ರಾಷ್ಟ್ರೀಯ ಮತದಾರರ ದಿನಾಚರಣೆ (National Voters' Day) ಅಂಗವಾಗಿ ಏರ್ಪಡಿಸಬೇಕಾದ ಸ್ಪರ್ಧೆಗಳ ವಿವರ :-

1. ಪ್ರಬಂಧ ಸ್ಪರ್ಧೆ, (ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ)
2. ಪೋಸ್ಟರ್ ಡಿಸೈನ್ (ಭಿತ್ತಿ ಚಿತ್ರ)
3. ರಸಪ್ರಶ್ನೆಯ ಸ್ಪರ್ಧಾತ್ಮಕ ಚಟುವಟಿಕೆಗಳು (ಪ್ರೌಢಶಾಲಾ ವಿಭಾಗಕ್ಕೆ ಮಾತ್ರ)

II ಸ್ಪರ್ಧೆಗಳನ್ನು ಆಯೋಜಿಸಬೇಕಾದ ವಿದ್ಯಾಸಂಸ್ಥೆಗಳು :-

1. ಪ್ರೌಢಶಾಲೆಗಳು [ಸರ್ಕಾರಿ, ಅನುದಾನಿತ, ಅನುದಾನ ರಹಿತ ಮತ್ತು ಖಾಸಗಿ ವಿದ್ಯಾಸಂಸ್ಥೆಗಳು]
2. ಪದವಿ ಪೂರ್ವ / ತತ್ಸಮಾನ ಕಾಲೇಜುಗಳು, ಪಾಲಿಟೆಕ್ನಿಕ್ ಸಂಸ್ಥೆಗಳು [ಸರ್ಕಾರಿ, ಅನುದಾನಿತ, ಅನುದಾನ ರಹಿತ ಮತ್ತು ಖಾಸಗಿ ವಿದ್ಯಾಸಂಸ್ಥೆಗಳು]
3. ಪದವಿ / ತತ್ಸಮಾನ ಕಾಲೇಜುಗಳು, [ಸರ್ಕಾರಿ, ಅನುದಾನಿತ, ಅನುದಾನ ರಹಿತ ಮತ್ತು ಖಾಸಗಿ ವಿದ್ಯಾಸಂಸ್ಥೆಗಳು]
4. ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಕಾಲೇಜುಗಳು, ವಿಶ್ವವಿದ್ಯಾನಿಲಯಗಳು / ಸ್ನಾತ್ತಕೋತ್ತರ, [ಸರ್ಕಾರಿ, ಅನುದಾನಿತ, ಅನುದಾನ ರಹಿತ ಮತ್ತು ಖಾಸಗಿ ವಿದ್ಯಾಸಂಸ್ಥೆಗಳು]

III ನಡೆಸಬೇಕಾದ ಸ್ಪರ್ಧೆಯ ರೂಪರೇಷೆಗಳು ;-

1. ಪ್ರಬಂಧ :-

ಗರಿಷ್ಟ 750 ಪದಗಳಿಗೂ ಮೀರದಂತೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಬರೆಯುವುದು. ಎರಡೂ ಭಾಷೆಗಳ ಪ್ರಬಂಧವನ್ನು ಪ್ರತ್ಯೇಕವಾಗಿ ಬಹುಮಾನ ನೀಡಲು ಪರಿಗಣಿಸಲಾಗುವುದು. ಪ್ರಬಂಧ ಸ್ಪರ್ಧೆಗಳಿಗೆ ನೀಡಬಹುದಾದ ವಿಷಯಗಳ ಮಾದರಿಯನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.

ಭಿತ್ತಿಚಿತ್ರ ತಯಾರಿಕೆ :-

22 X 28 ಇಂಚಿನ ಸ್ಟ್ಯಾಂಡರ್ಡ್ ಚಾರ್ಟ್ ಪೇಪರಿನಲ್ಲಿ. ಭಿತ್ತಿಚಿತ್ರ ತಯಾರಿಕೆಗೆ ನೀಡಬಹುದಾದ ವಿಷಯಗಳ ಮಾದರಿಯನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.

2. ರಸಪ್ರಶ್ನೆ :-

ಚುನಾವಣಾ ವಿಷಯಕ್ಕೆ ಸಂಬಂಧಿಸಿದ ವಿಷಯಗಳನ್ನು ಆಯಾ ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಿಕೊಂಡು, (ಕೋವಿಡ್-19 ಇರುವ ಈ ಸಂದರ್ಭದಲ್ಲಿ ಸುರಕ್ಷಿತ ಕ್ರಮಗಳನ್ನು ಅನುಸರಿಸಿ (Safety Measures) ಚುನಾವಣೆಗಳನ್ನು ನಡೆಸುವುದು ಹೇಗೆ ಎಂಬ ಬಗ್ಗೆ ಪ್ರಶ್ನೆಗಳು ಕಡ್ಡಾಯವಾಗಿ ಒಳಗೊಂಡಿರತಕ್ಕದ್ದು) ಈ ಕಛೇರಿಗೆ ವರದಿ ಮಾಡುವುದು.

ಪ್ರಬಂಧ, ಭಿತ್ತಿ ಪತ್ರ ಬಗ್ಗೆ ಈ ಕಛೇರಿಯಿಂದ ಅನುಬಂಧ – 1 ರಲ್ಲಿ ನೀಡಿರುವ ವಿಷಯಗಳ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಹಂತದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವುದು.

(ಕೋವಿಡ್-19 ಇರುವ ಈ ಸಂದರ್ಭದಲ್ಲಿ ಸುರಕ್ಷಿತ ಕ್ರಮಗಳನ್ನು ಅನುಸರಿಸಿ (Safety Measures) ಚುನಾವಣೆಗಳನ್ನು ನಡೆಸುವುದು ಹೇಗೆ ಎಂಬ ಬಗ್ಗೆ ಪ್ರಶ್ನೆಗಳು ಒಳಗೊಂಡಿರತಕ್ಕದ್ದು)

IV ಸಂಪನ್ಮೂಲ ಮತ್ತು ಓದಬೇಕಾದ ಪುಸ್ತಕಗಳು:-

1. India Votes – General Elections 2019 / ಲೋಕಸಭಾ ಚುನಾವಣೆ 2019
2. Returning Officer's Handbook / ರಿಟರ್ನಿಂಗ್ ಅಧಿಕಾರಿಯ ಕೈಪಿಡಿ
3. Book on Model code of conduct / ನೀತಿ ಸಂಹಿತೆಯ ಕೈಪಿಡಿ
4. SVEEP National Document / ರಾಷ್ಟ್ರೀಯ SVEEP ದಾಖಲೆ
5. SVEEP Portal / SVEEP ಪೋರ್ಟಲ್
6. Watching Videos from ECI you tube / ಭಾರತ ಚುನಾವಣಾ ಆಯೋಗದ ಯು-ಟ್ಯೂಬ್ ಚಾನಲ್ ವೀಕ್ಷಣೆ
7. Consistently following the updating from India Votes Face book page and others / ಭಾರತ ಮತದಾರರ ಫೇಸ್‌ಬುಕ್ ಪುಟ ಹಾಗೂ ಇತರೆ, ನಿರಂತರ ವೀಕ್ಷಣೆ ಹಾಗೂ ಇಂದೀಕರಣ.
8. ECI web site / ಭಾರತ ಚುನಾವಣಾ ಆಯೋಗದ ಅಂತರ್ಜಾಲ : eci.nic.in
9. CEO web site / ಮುಖ್ಯ ಚುನಾವಣಾಧಿಕಾರಿಗಳ [ಸಿಇಓ] ಅಂತರ್ಜಾಲ : ceokarnataka.kar.nic.in

V ಸ್ಪರ್ಧಾತ್ಮಕ ಚಟುವಟಿಕೆಗಳನ್ನು ನಡೆಸಬೇಕಾದ ವೇಳಾಪಟ್ಟಿ ಹಾಗೂ ಕಾರ್ಯಕ್ರಮದ ಜವಾಬ್ದಾರಿ :-

ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಶಾಲೆ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಏರ್ಪಡಿಸಬೇಕಾಗಿರುವ ವೇಳಾಪಟ್ಟಿ ಮತ್ತು ಕಾರ್ಯಕ್ರಮದ ಜವಾಬ್ದಾರಿಯನ್ನು ನಿಗದಿ ಮಾಡಿರುವ ವಿವರಗಳನ್ನು ಅನುಬಂಧ – 2 ರಲ್ಲಿ ನೀಡಲಾಗಿದೆ.

VI ಬಹುಮಾನದ ಅನುದಾನ ಹಂಚಿಕೆ :-

ಈ ಸ್ಪರ್ಧಾತ್ಮಕ ಚಟುವಟಿಕೆಗಳನ್ನು ಆಯೋಜಿಸಲು ಹಾಗೂ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಸಲುವಾಗಿ ಪ್ರತಿ ಸ್ಪರ್ಧೆಗೆ ಬಹುಮಾನವನ್ನು ಪುಸ್ತಕಗಳ ರೂಪದಲ್ಲಿ ನೀಡಲಾಗುವುದು. ಶಾಲಾ ಮಟ್ಟದಲ್ಲಿ ಆಯೋಜಿಸುವ ಸ್ಪರ್ಧೆಗಳಿಗೆ ಬೇಕಾಗುವ ಅನುದಾನವನ್ನು ಸ್ಥಳೀಯ ನಿಧಿಯಿಂದ ಭರಿಸತಕ್ಕದ್ದು.

ರಸಪ್ರಶ್ನೆ ಸ್ಪರ್ಧೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸ್ಪರ್ಧೆಗಳ ವಿಜೇತರಿಗೆ ಈ ಕೆಳಕಂಡಂತೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ವಿತರಿಸಲಾಗುವುದು.

| ಬಹುಮಾನಗಳನ್ನು ಪುಸ್ತಕಗಳ ರೂಪದಲ್ಲಿ ನೀಡುವ ವಿವರ | ತಾಲ್ಲೂಕು ಮಟ್ಟದಲ್ಲಿ | ಜಿಲ್ಲಾ ಮಟ್ಟದಲ್ಲಿ |
|---|---|---|
| | ಬಹುಮಾನದ ಮೊತ್ತ ರೂಪಾಯಿಗಳಲ್ಲಿ | |
| ಪ್ರಥಮ ಬಹುಮಾನ | 500 | 1500 |
| ದ್ವಿತೀಯ ಬಹುಮಾನ | 250 | 1000 |
| ತೃತೀಯ ಬಹುಮಾನ | 125 | 500 |

ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳಿಗೆ ಒದಗಿಸುವ ಅನುದಾನದ ವಿವರಗಳವನ್ನು ಅನುಬಂಧ – 3 ರಲ್ಲಿ ನೀಡಲಾಗಿದೆ.

## VII ವಿಜೇತರನ್ನು ಆಯ್ಕೆ ಮಾಡುವ ಕಾರ್ಯವಿಧಾನ :–

1. ಶಾಲೆ ಮಟ್ಟದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ವಿಜೇತರನ್ನು ಆಯ್ಕೆ ಮಾಡುತ್ತಾರೆ.
2. ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ವಿಜೇತರನ್ನು ಆಯ್ಕೆ ಮಾಡುತ್ತಾರೆ.
3. ಜಿಲ್ಲಾ ಮಟ್ಟದ ವಿಜೇತರನ್ನು ಆಯ್ಕೆ ಮಾಡುವ ಸಮಿತಿಯು ಜಿಲ್ಲಾ ಪಂಚಾಯಿತ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ, ಉಪನಿರ್ದೇಶಕರು [ಆಡಳಿತ], ಉಪನಿರ್ದೇಶಕರು [ಅಭಿವೃದ್ಧಿ], ಉಪನಿರ್ದೇಶಕರು [ಪದವಿ ಪೂರ್ವ], ಆಯಾ ಜಿಲ್ಲೆಯ ಪದವಿ/ ತಾಂತ್ರಿಕ/ ವೈದ್ಯಕೀಯ ಕಾಲೇಜುಗಳ ಪ್ರಾಂಶುಪಾಲರನ್ನೊಳಗೊಂಡಿರುತ್ತದೆ.
4. ಶಾಲಾ ಮಟ್ಟದಲ್ಲಿ ಆಯ್ಕೆಯಾದ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ತಾಲ್ಲೂಕು ಮಟ್ಟಕ್ಕೆ, ಅದೇ ರೀತಿ ತಾಲ್ಲೂಕು ಮಟ್ಟದಿಂದ ಜಿಲ್ಲಾ ಮಟ್ಟಕ್ಕೆ ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಮಾತ್ರ ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡತಕ್ಕದ್ದು.

## VIII ಉಸ್ತುವಾರಿ, ಮತ್ತು ದಸ್ತಾವೇಜು ಮಾಡುವುದರ ವರದಿ ಸಿದ್ದಪಡಿಸುವುದು:–

1. ಶಾಲಾ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಮತ್ತು ವಿಜೇತರ ಪಟ್ಟಿಯನ್ನು ಹಾಗೂ ಸ್ಪರ್ಧೆಗಳನ್ನು ವೀಕ್ಷಿಸಿದ ವೀಕ್ಷಕರ ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ನೀಡುವುದು.
2. ತಾಲ್ಲೂಕು ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಮತ್ತು ವಿಜೇತರ ಪಟ್ಟಿಯನ್ನು ಹಾಗೂ ಸ್ಪರ್ಧೆಗಳನ್ನು ವೀಕ್ಷಿಸಿದ ವೀಕ್ಷಕರ ಮಾಹಿತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಆಯಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿಗೆ ನೀಡುವುದು.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರು ಸ್ಕೀಮ್ ನೋಡಲ್/ಜಿಲ್ಲಾ ಸಮನ್ವಯಾಧಿಕಾರಿಗಳು ಸಹ ಇದ್ದು, ಅಂತರ ಶಾಲೆ / ಅಂತರ ಪದವಿ ಪೂರ್ವ ಕಾಲೇಜು /

ಅಂತರ ಕಾಲೇಜು / ಅಂತರ ವಿಶ್ವವಿದ್ಯಾನಿಲಯ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳ ಚಟುವಟಿಕೆ ಬಗ್ಗೆ ಉಸ್ತುವಾರಿ ವಹಿಸಿ ಸ್ಪರ್ಧೆಗಳ ವಿವರಗಳನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಕಛೇರಿಯಿಂದ ಒದಗಿಸಲಾಗುವ ಗೂಗಲ್ ಸ್ಪ್ರೆಡ್‌ಶೀಟ್‌ನಲ್ಲಿ ಅಳವಡಿಸುವುದು.

4. ಮೇಲೆ ತಿಳಿಸಿರುವ ಎಲ್ಲಾ ಚಟುವಟಿಕೆಗಳನ್ನು, ಸ್ಪರ್ಧೆಯ ಪ್ರಕ್ರಿಯೆಯನ್ನು ಹಾಗೂ ಅದರಲ್ಲಿ ಗಮನಿಸಲಾದ ಅತ್ಯುತ್ತಮ ಅಭ್ಯಾಸಗಳನ್ನು ಒಳಗೊಂಡ ಪ್ರಕರಣಗಳನ್ನು ದಾಖಲಿಸಿ, ಅತ್ಯುತ್ತಮ ಗುಣಮಟ್ಟದ ಫೋಟೋಗಳನ್ನು ವಿವರಣೆಯೊಂದಿಗೆ/ಸೂಕ್ತ ಶೀರ್ಷಿಕೆಯೊಂದಿಗೆ ಅದರ ವರದಿಯನ್ನು ಮುಖ್ಯ ಚುನಾವಣಾಧಿಕಾರಿಗಳ ಕಛೇರಿಗೆ ಕಳುಹಿಸುವುದು.

**IX** ಕೋವಿಡ್–19ರ ಸಂಬಂಧ ಮುಂಜಾಗ್ರತಾ ಕ್ರಮಗಳು:–

1. ಕಡ್ಡಾಯವಾಗಿ ಮೂಗು ಮತ್ತು ಬಾಯಿ ಮುಚ್ಚಿಕೊಳ್ಳುವಂತೆ ಮಾಸ್ಕ್ ಧರಿಸುವುದು
2. ಕಡ್ಡಾಯವಾಗಿ ಕನಿಷ್ಟ 6 ಅಡಿಗಳ ವ್ಯಕ್ತಿಗತ ಅಂತರ ಕಾಯ್ದುಕೊಳ್ಳುವುದು
3. ಕೈಗಳನ್ನು ಸೋಪು ದ್ರಾವಣದಿಂದ ಶುಭ್ರಗೊಳಿಸುವುದು (ಸ್ಯಾನಿಟೈಜೇಷನ್ ಮಾಡಿಕೊಳ್ಳುವುದು)
4. ಪ್ರತಿಯೊಬ್ಬರಿಗೂ ಕಡ್ಡಾಯವಾಗಿ ದೇಹದ ಉಷ್ಣತೆಯನ್ನು ಪರೀಕ್ಷಿಸತಕ್ಕದ್ದು (ಟೆಂಪರೇಚರ್ ಚೆಕ್)
5. ಸ್ಪರ್ಧೆಗಳನ್ನು ಆಯೋಜಿಸುವ ಮುನ್ನ ಶಾಲಾ/ಕಾಲೇಜು/ಗ್ರಂಥಾಲಯ ಇತ್ಯಾದಿ ಕೊಠಡಿಗಳನ್ನು ಕಡ್ಡಾಯವಾಗಿ ಸ್ವಚ್ಚಗೊಳಿಸಿ ಸ್ಯಾನಿಟೈಸೇಷನ್ ಮಾಡತಕ್ಕದ್ದು
6. ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು ನಿಗದಿಪಡಿಸಿದ ಕೋವಿಡ್ 19 ರ ಮುಂಜಾಗ್ರತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
7. ನಿಯಮಿತವಾಗಿ ಸರ್ಕಾರದಿಂದ ಹೊರಡಿಸಲಾಗುವ ಸೂಚನೆಗಳು/ಸುತ್ತೋಲೆಗಳು/ಕೋವಿಡ್ 19 ರ ನಿಯಮಾವಳಿಗನುಸಾರ ಹಾಗೂ ಭಾರತ ಚುನಾವಣಾ ಆಯೋಗ/ಮುಖ್ಯ ಚುನವಣಾಧಿಕಾರಿಯವರ ಕಛೇರಿ, ಕರ್ನಾಟಕ ರವರಿಂದ ನಿರ್ದೇಶಿಸಲ್ಪಡುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

22/10/21

## X ಭಾಗೀದಾರರ (stakeholder) ಜವಾಬ್ದಾರಿಗಳು:-

| ಅಧಿಕಾರಿಗಳು | ಜವಾಬ್ದಾರಿಗಳು |
|---|---|
| ಉಪ ನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ<br>ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ, | ಸ್ಪರ್ಧೆಗಳ ಬಗ್ಗೆ ಶಾಲೆಗಳು / ಕಾಲೇಜುಗಳಿಗೆ ತಿಳಿಸುವುದು ಮತ್ತು ಜಿಲ್ಲೆಯ ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಇವರಿಗೆ ವರದಿ ಮಾಡುವುದು. |
| ಪಾಲಿಟೆಕ್ನಿಕ್ ನೋಡಲ್ ಅಧಿಕಾರಿಗಳು,<br>ಪದವಿ ಕಾಲೇಜು ನೋಡಲ್ ಅಧಿಕಾರಿಗಳು,<br>ವಿಶ್ವವಿದ್ಯಾನಿಲಯಗಳ ನೋಡಲ್ ಅಧಿಕಾರಿಗಳು | ಶಿಕ್ಷಣ ಸಂಸ್ಥೆಗಳು ಫಲಿತಾಂಶವನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಪ್ರಬಂಧವನ್ನು ಎಲ್ಲರ ಮೊಬೈಲ್ ವಾಟ್ಸಪ್‌ಗಳಿಗೆ ರವಾನಿಸತಕ್ಕದ್ದು. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಫಲಿತಾಂಶವನ್ನು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಇವರಿಗೆ ಆನ್‌ಲೈನ್‌ನಲ್ಲಿ ವರದಿ ಮಾಡತಕ್ಕದ್ದು. |
| ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿಗಳು | ಪ್ರಬಂಧ, ಭಿತ್ತಿಚಿತ್ರ ತಯಾರಿಕೆ ರಸಪ್ರಶ್ನೆ ಚುಟುವಟಿಕೆಗಳಲ್ಲಿ ಜಿಲ್ಲಾ ಮಟ್ಟದಲ್ಲಿನ ವಿಜೇತರ ವರದಿಯನ್ನು ಗೂಗಲ್ ಸ್ಪ್ರೆಡ್ ಶೀಟ್‌ನಲ್ಲಿ ಅಳವಡಿಸಲು ಕ್ರಮ ಜರುಗಿಸುವುದು. |
| ಹಿರಿಯ ಸಮಾಲೋಚಕರು [ಸ್ವೀಪ್] | ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಮಾಹಿತಿಯನ್ನು ಆನ್‌ಲೈನ್ ಮೂಲಕ ಪ್ರಸಾರ ಮಾಡುವುದು ಮತ್ತು ಜಿಲ್ಲೆಗಳ ವಿದ್ಯಾರ್ಥಿಗಳ ವಿವರಗಳು, ಪ್ರೇಕ್ಷಕರ ಹಾಜರಾತಿ, ವಿಜೇತರ ವಿವರಗಳು ಸೇರಿದಂತೆ ದತ್ತಾಂಶ ಸಂಗ್ರಹಣೆ ಕುರಿತು ಡಿಇಓ ಗಳೊಂದಿಗೆ ಸಮನ್ವಯ ಸಾಧಿಸುವುದು. |
| ಬಿಬಿಎಂಪಿಯ ವಿಶೇಷ ಆಯುಕ್ತರು | ಬಿಬಿಎಂಪಿ ಪ್ರದೇಶದ ಎಲ್ಲಾ ಶಾಲೆಗಳಲ್ಲಿನ ನೋಡಲ್ ಅಧಿಕಾರಿಗಳಿಗೆ ಆನ್‌ಲೈನ್ ಮೂಲಕ ಮಾಹಿತಿಯನ್ನು ಪ್ರಸಾರ ಮಾಡಲು ಮತ್ತು ಸ್ಪರ್ಧೆಯನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಹೊಂದಿರುತ್ತಾರೆ. |

**XI** ನಮೂದುಗಳು ಮತ್ತು ಸಂಪರ್ಕ ಮಾಹಿತಿಯ ಸಲ್ಲಿಕೆ:-

1. ಎಲ್ಲಾ ಸ್ಪರ್ಧೆಗಳ ವಿಜೇತರ ಸಂಪೂರ್ಣ ವಿವರಗಳನ್ನು ಕಡ್ಡಾಯವಾಗಿ ಈ ಕಛೇರಿಯಿಂದ ಒದಗಿಸಲಾದ ಗೂಗಲ್ ಸ್ಪ್ರೆಡ್‌ಶೀಟ್‌ನಲ್ಲಿ ಅಳವಡಿಸುವುದು
2. ಯಾವುದೇ ಪ್ರಶ್ನೆ ಅಥವಾ ಸ್ಪಷ್ಟೀಕರಣಕ್ಕಾಗಿ, consveep@gmail.com ಅಥವಾ 080-22288823 ಗೆ ಕರೆ ಮಾಡಬಹುದು, ಶ್ರೀ ಎಂ.ವಿ. ವೆಂಕಟಾಚಲಪತಿ, ಮೊ: 9880152623. ಶ್ರೀ ರಮೇಶ್, ಆರ್. ಮೊ: 8867644865, ಶ್ರೀ. ಫಹೀಮ್- ಮೊ:7338423760 ಇವರುಗಳನ್ನು ಸಂಪರ್ಕಿಸಬಹುದು.

22/10/2021

(ಡಿ. ಶಂಭು ಭಟ್)
ಜಂಟಿ ಮುಖ್ಯ ಚುನಾವಣಾಧಿಕಾರಿಗಳು,
ಸಿ.ಆ.ಸು.ಇ (ಚುನಾವಣೆಗಳು)

ಪ್ರತಿಯನ್ನು ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬೆಂಗಳೂರು.
2. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಮಾನ್ಯ ಕುಲಪತಿಗಳು,
3. ಮಾನ್ಯ ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
4. ಮಾನ್ಯ ಕುಲಪತಿಗಳು, ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಬೆಂಗಳೂರು
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು,
6. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು,
7. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರ 18ನೇ ಸಂಪಿಗೆ ರಸ್ತೆ, ಬೆಂಗಳೂರು.
8. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
9. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು/ಕಲಬುರ್ಗಿ/ಬೆಳಗಾಂ/ಮೈಸೂರು.
10. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಆಯುಕ್ತರು ಬಿಬಿಎಂಪಿ ಬೆಂಗಳೂರು.
11. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ,
12. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು,
13. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸ್ವೀಪ್ ನೋಡಲ್ ಅಧಿಕಾರಿಗಳು,
14. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು [ಪ್ರಾಥಮಿಕ ಶಿಕ್ಷಣ] [ಪ್ರೌಢಶಿಕ್ಷಣ] ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಡಿ.ಎಸ್.ಇ.ಆರ್.ಟಿ. ಹಾಗೂ ವಿಭಾಗೀಯ ಇಎಲ್‌ಸಿ ನೋಡಲ್ ಅಧಿಕಾರಿಗಳು,
15. ನಿರ್ದೇಶಕರು, ಅಪರ ಆಯುಕ್ತಾಲಯ, ಕಲಬುರಗಿ ಮತ್ತು ಧಾರವಾಡ. ಹಾಗೂ ವಿಭಾಗೀಯ ಇಎಲ್‌ಸಿ ನೋಡಲ್ ಅಧಿಕಾರಿಗಳು,
16. ಸಹ ನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಮಂಡಳಿ, ಬೆಂಗಳೂರು.
17. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ,
18. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು [ಆಡಳಿತ] ಮತ್ತು [ಅಭಿವೃದ್ಧಿ] ಸಾರ್ವಜನಿಕ ಶಿಕ್ಷಣ ಇಲಾಖೆ,
19. ಎಲ್ಲಾ ತಹಸೀಲ್ದಾರರು, ಕಂದಾಯ ಇಲಾಖೆ, ಕರ್ನಾಟಕ ರಾಜ್ಯ,
20. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ,
21. ಕಛೇರಿ ಪ್ರತಿ/ರಕ್ಷಾ ಕಡತಕ್ಕೆ.

ಅನುಬಂಧ-01

ಸಂಖ್ಯೆ: ಸಿಆಸುಇ/33/SVEEP/2021, ದಿನಾಂಕ: 12ನೇ ಅಕ್ಟೋಬರ್ 2021

**2021-22 ನೇ ಸಾಲಿನ ರಾಷ್ಟ್ರೀಯ ಮತದಾರ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ನಡೆಸುವ ವಿವಿಧ ಸ್ಪರ್ಧೆಗಳ ವಿವರ**

ಭಿತ್ತಿಪತ್ರ ತಯಾರಿಕೆಗೆ ನೀಡಬಹುದಾದ ವಿಷಯಗಳ ಮಾದರಿ

22 x 28 ಇಂಚುಗಳ ಅಳತೆಯುಳ್ಳ ನಿಗದಿತ ಕಾಗದ ಬಳಸಿ ಭಿತ್ತಿ ಚಿತ್ರ ಬಿಡಿಸುವುದು ರಚಿಸುವುದು.

| | | |
|---|---|---|
| **I-Posters making for High School students** | | |
| 1 | Safe measures for Elections during COVID -19 pandemic | ಕೋವಿಡ್-19 ಸಾಂಕ್ರಾಮಿಕ ರೋಗದ ಸಮಯದಲ್ಲಿ ನಡೆಸುವ ಚುನಾವಣೆಗಳಿಗೆ ಸುರಕ್ಷತಾ ಕ್ರಮಗಳು. |
| 2 | Facilities available at polling station | ಮತದಾನ ಕೇಂದ್ರದಲ್ಲಿ ಲಭ್ಯವಿರುವ ಸೌಲಭ್ಯಗಳು |
| **Essay for High School students (Kannada&English)** | | |
| 1 | Role of ELCs in improving electoral registration | ಮತದಾರರ ನೋಂದಣಿಯನ್ನು ಸುಧಾರಿಸುವಲ್ಲಿ ಮತದಾರರ ಸಾಕ್ಷರತಾ ಸಂಘಗಳ ಪಾತ್ರ |
| 2 | How to conduct the elections during the pandemic of Covid-19 | ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ ಚುನಾವಣೆಗಳನ್ನು ಹೇಗೆ ನಡೆಸುವುದು? |
| 3 | Write a essay on Election Apps | ಚುನಾವಣಾ ಆ್ಯಪ್‌ಗಳ ಕುರಿತು ಪ್ರಬಂಧ ಬರೆಯಿರಿ |
| **II-Posters making for PUC and Polytechnic students** | | |
| 1 | Model Polling Station | ಮಾದರಿ ಮತದಾನ ಕೇಂದ್ರ |
| 2 | The role of youth in conducting effective elections | ಪರಿಣಾಮಕಾರಿ ಚುನಾವಣೆ ನಡೆಸುವಲ್ಲಿ ಯುವಕರ ಪಾತ್ರ |
| **Essay for PUC and Polytechnic students (Kannada&English)** | | |
| 1 | Effectiveness of Electoral Literacy from learning stage | ಕಲಿಕೆಯ ಹಂತದಿಂದ ಮತದಾರ ಸಾಕ್ಷರತೆಯ ಪರಿಣಾಮಗಳು |
| 2 | Importance of Forms 6, 6a, 7, 8 and 8a | ನಮೂನೆ 6, 6ಎ, 7, 8 ಮತ್ತು 8ಎ ಗಳ |

| | | |
|---|---|---|
| | | ಪ್ರಾಮುಖ್ಯತೆ |
| 3 | Bringing change in democracy through vote | ಮತದಾನದ ಮೂಲಕ ಪ್ರಜಾಪ್ರಭುತ್ವದಲ್ಲಿ ಬದಲಾವಣೆ ತರುವುದು |
| | **III-Posters making for Degree and PG students** | |
| 1 | Strategies for conducting safe elections during pandemic time | ಸಾಂಕ್ರಾಮಿಕ ಸಮಯದಲ್ಲಿ ಸುರಕ್ಷಿತ ಚುನಾವಣೆಗಳನ್ನು ನಡೆಸಲು ತಂತ್ರಗಳು |
| 2 | Role about code of conduct for free fair election | ಮುಕ್ತ ನ್ಯಾಯಯುತ ಚುನಾವಣೆಗಾಗಿ ನೀತಿ ಸಂಹಿತೆಯ ಪಾತ್ರ |
| | **Essay for Degree and PG students (Kannada&English)** | |
| 1 | Strategies for increased electoral participation | ಮತದಾರರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ತಂತ್ರಗಳು |
| 2 | Role of electoral education in young voters for building strong democracy | ಸದೃಢವಾದ ಪ್ರಜಾಪ್ರಭುತ್ವವನ್ನು ನಿರ್ಮಿಸಲು ಯುವ ಮತದಾರರಲ್ಲಿ ಮತದಾರರ ಶಿಕ್ಷಣದ ಪಾತ್ರ |
| 3 | Importance & robustness of EVM/VVPAT for free & fair election | ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯಲ್ಲಿ ಇವಿಎಂ ಮತ್ತು ವಿವಿಪ್ಯಾಟ್‌ನ ಸದೃಡತೆ ಮತ್ತು ಪ್ರಾಮುಖ್ಯತೆ |

22/10/21

# ಅನುಬಂಧ–2

ಸಂಖ್ಯೆ: ಸಿಆಸುಇ/33/SVEEP/2021, ದಿನಾಂಕ: 22ನೇ ಅಕ್ಟೋಬರ್ 2021

ಸ್ಪರ್ಧಾ ಚಟುವಟಿಕೆಗಳನ್ನು ನಡೆಸಬೇಕಾದ ವೇಳಾಪಟ್ಟಿ ಹಾಗೂ ಕಾರ್ಯಕ್ರಮದ ಜವಾಬ್ದಾರಿ :–

| ಕ್ರ ಸಂ | ಚಟುವಟಿಕೆ | ನಿಗದಿಪಡಿಸಿದ ದಿನಾಂಕ | ಕಾರ್ಯಕ್ರಮದ ಜವಾಬ್ದಾರಿ ನಿಗದಿ |
|---|---|---|---|
| 1 | ಸ್ಪರ್ಧೆಗಳ ಬಗ್ಗೆ ಎಲ್ಲಾ ಶಾಲಾಕಾಲೇಜುಗಳಿಗೆ ತಿಳಿಸುವುದು | 25–10–2021 | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ (ಉಪನಿರ್ದೇಶಕರು, ರಾಜ್ಯ & ಜಿಲ್ಲಾ ಮಟ್ಟದ ತರಬೇತುದಾರರು, ಪ್ರಾಂಶುಪಾಲರು) |
| 2 | ವಿದ್ಯಾರ್ಥಿಗಳ ನೋಂದಣಿ:– ರಸಪ್ರಶ್ನೆ, ಪ್ರಬಂಧ, ಭಿತ್ತಿಚಿತ್ರ | 27–10–2021 | ಮತದಾರ ಸಾಕ್ಷರತಾ ಸಂಘದ ಆಯಾ ಶಾಲಾ ಕಾಲೇಜುಗಳ ನೋಡಲ್ ಅಧಿಕಾರಿಗಳು |
| 3 | ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳನ್ನು ಕೈಗೊಳ್ಳುವುದು | 28–10–2021 ರಿಂದ 02–11–2021 | ಆಯಾ ಶಾಲೆ/ಕಾಲೇಜುಗಳ ಮತದಾರ ಸಾಕ್ಷರತಾ ಸಂಘದ ನೋಡಲ್ ಅಧಿಕಾರಿಗಳು (ಉಪನಿರ್ದೇಶಕರು, ರಾಜ್ಯ & ಜಿಲ್ಲಾ ಮಟ್ಟದ ತರಬೇತುದಾರರು, ಪ್ರಾಂಶುಪಾಲರು) |
| 4 | ತಾಲ್ಲೂಕು ಮಟ್ಟದಲ್ಲಿ ಸ್ಪರ್ಧೆಗಳನ್ನು ಕೈಗೊಳ್ಳುವುದು | 8–11–2021 ರಿಂದ 11–11–2021 | ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 5 | ಜಿಲ್ಲಾ ಮಟ್ಟದಲ್ಲಿ ಸ್ಪರ್ಧೆಗಳನ್ನು ವರ್ಗವಾರು ಆಯೋಜಿಸಿ ವಿಜೇತರನ್ನು ಘೋಷಿಸುವುದು. | 15–11–2021 ರಿಂದ 19–11–2021 | ಆಯಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿ |
| 6 | ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ಪೂರ್ಣಗೊಳಿಸಿ ವಿಜೇತರ ಪಟ್ಟಿಯನ್ನು ಅಪರ ಮುಖ್ಯ ಚುನಾವಣಾಧಿಕಾರಿ ಇವರಿಗೆ ರವಾನಿಸುವುದು | 20–11–2021 | ಆಯಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು [ಹೈ ರೆಸಲ್ಯೂಷನ್ ಫೋಟೋಗಳು ಮತ್ತು ವಿಜೇತರ ಭಿತ್ತಿ ಚಿತ್ರಗಳು, ಇವುಗಳನ್ನು ಸ್ಕ್ಯಾನ್ ಮಾಡಿ ಪ್ರತಿಗಳನ್ನು consveep@gmail.com ಇ–ಮೇಲ್ ಮಾಡುವುದು. |
| 7 | ವಿದ್ಯಾರ್ಥಿಗಳ ಮಾಹಿತಿ ಹಾಗೂ ಇತರೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಿ ಕ್ರೋಢೀಕರಿಸುವುದು | 20–11–2021 | ಆಯಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿ |
| 8 | ಜಿಲ್ಲಾ ಮಟ್ಟದ ಅಂತಿಮ ವಿಜೇತರ ವಿವರಗಳನ್ನು ಗೂಗಲ್ ಸ್ಪ್ರೆಡ್ ಶೀಟನಲ್ಲಿ ಅಳವಡಿಸುವುದು | 20–11–2021 | ಆಯಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿ |
| 9 | ಎಲ್ಲಾ ಜಿಲ್ಲೆಗಳ ರಸಪ್ರಶ್ನೆ, ಪ್ರಬಂಧ, ಭಿತ್ತಿಚಿತ್ರ ಸ್ಪರ್ಧೆಗಳು ಪೂರ್ಣಗೊಂಡಿರುವ ಮಾಹಿತಿ ಸಂಗ್ರಹಣೆ | 20–11–2021 | ಹಿರಿಯ ಸಮಾಲೋಚಕರು [ಸ್ವೀಪ್] |
| 10 | ಪ್ರತಿ ಜಿಲ್ಲೆಯಿಂದ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಣೆ | 20–11–2021 | ಹಿರಿಯ ಸಮಾಲೋಚಕರು [ಸ್ವೀಪ್] |

| | | | |
|---|---|---|---|
| 11 | ರಾಜ್ಯ ಮಟ್ಟದಲ್ಲಿನ ಸ್ಪರ್ಧೆಗೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ವಸತಿ ವ್ಯವಸ್ಥೆ ಒದಗಿಸುವುದು | ಡಿಸೆಂಬರ್ 2021 ರ ಮೂರನೆ ವಾರ | ಆಯುಕ್ತರು, ಬಿ.ಬಿ.ಎಂ.ಪಿ. |
| 12 | ವಿಭಾಗೀಯ ಮಟ್ಟದ ಸ್ಪರ್ಧೆಗಳು/ ರಾಜ್ಯ ಮಟ್ಟದಲ್ಲಿ ಭಾಗವಹಿಸುವುದು | | ಮತದಾರ ಸಾಕ್ಷರತಾ ಸಂಘದ ತರಬೇತುದಾರರಿಂದ |
| 13 | ವಿಭಾಗೀಯ ಮಟ್ಟದಲ್ಲಿನ ವಿಜೇತರಿಗೆ ರಾಜ್ಯಮಟ್ಟದ ಸ್ಪರ್ಧೆ | | ಅಪರ ಮುಖ್ಯ ಚುನಾವಣಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ ಸಮಿತಿ |
| 14 | ರಾಜ್ಯ ಮಟ್ಟದ ವಿಜೇತರಿಗೆ ಘೋಷಣೆ | | ಹಿರಿಯ ಸಮಾಲೋಚಕರು [ಸ್ವೀಪ್] |

22/10/21